ಖಾಸಗಿ ಪ್ರಸಾರಕ್ಕಾಗಿ ಮಾತ್ರ



# ಜನರಲ್ಲಿ ನಾಗರಿಕ ಪ್ರಜ್ಞೆ ಅಗತ್ಯ: ಬಿ.ಟಿ ರಂಜನ್




ಬಿ.ಟಿ. ರಂಜನ್ ಮಾತನಾಡುತ್ತಿರುವುದು

**ಪುತ್ತೂರು:** ಗ್ರಾಮೀಣ ಪ್ರದೇಶದ ಜನರು ರಾಷ್ಟ್ರೀಯ ಪತ್ರಿಕೆಗಳಲ್ಲಿ ಸುದ್ದಿಗಳಿಗಿಂತ ಹೆಚ್ಚಾಗಿ ಪ್ರಾದೇಶಿಕ ಸುದ್ದಿಗಳಿಗೆ ಹೆಚ್ಚಿನ ಮಹತ್ವವನ್ನು ಕೊಡುತ್ತಾರೆ. ಆದರೆ ಹೆಚ್ಚಿನ ಪತ್ರಿಕೆಗಳು ಗ್ರಾಮೀಣ ಸುದ್ದಿಗಳಿಗೆ ಪ್ರಾಮುಖ್ಯತೆಯನ್ನು ನೀಡುವಲ್ಲಿ ಯಾವುದೇ ಪ್ರಯತ್ನ ಮಾಡುತ್ತಿಲ್ಲ. ಆದ್ದರಿಂದ ಅದು ಗ್ರಾಮೀಣ ಜನರ ಸ್ಪಂದನೆಯನ್ನು ಪಡೆಯುವಲ್ಲಿ ವಿಫಲವಾಗುತ್ತಿದೆ. ಎಂದು ಉದಯವಾಣಿ ದಿನಪತ್ರಿಕೆಯ ಹಿರಿಯ ಪತ್ರಕರ್ತ ಬಿ.ಟಿ.ರಂಜನ್ ಹೇಳಿದರು.

ಅವರು ಇತ್ತೀಚೆಗೆ ಇಲ್ಲಿನ ವಿವೇಕಾನಂದ ಕಾಲೇಜಿನಲ್ಲಿ ಪತ್ರಿಕೋದ್ಯಮ ವಿಭಾಗದ ಆಶ್ರಯದಲ್ಲಿ ನಡೆದ ಅತಿಥಿ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಗ್ರಾಮೀಣ ಪತ್ರಿಕೋದ್ಯಮ ಎಂಬ ವಿಷಯದ ಕುರಿತು ಮಾತನಾಡಿದರು.

ಜನರು ಯಾವುದೇ ಸುದ್ದಿಯನ್ನು ಪತ್ರಿಕೆಗಳನ್ನು ಓದಿ ಖಚಿತ ಪಡಿಸಿಕೊಳ್ಳುತ್ತಾರೆ. ಹಾಗೆಯೇ ಪತ್ರಿಕೆಗಳೂ ಕೂಡ ಗ್ರಾಮೀಣ ಸಮಸ್ಯೆಗಳಿಗೆ ಸ್ಪಂದಿಸಬೇಕಾದ ಅಗತ್ಯವಿದೆ. ಜನರಲ್ಲೂ ನಾಗರಿಕಾ ಪ್ರಜ್ಞೆ ಇರಬೇಕು. ತಮ್ಮ ತಮ್ಮ ಊರಿನ ಸಮಸ್ಯೆಗಳ ಬಗ್ಗೆ ಎಚ್ಚರವಿದ್ದಾಗ ಮಾತ್ರ ಪತ್ರಿಕೆಗಳೂ ಕೂಡ ಅವರ ಜೊತೆ ಕೈ ಜೋಡಿಸುತ್ತವೆ. ಜನರಲ್ಲಿ ಸಮಸ್ಯೆಗಳನ್ನು ಪ್ರತಿಭಟಿಸುವ ಸ್ವಭಾವ ಕಡಿಮೆಯಾಗುತ್ತಿದೆ. ಆದ್ದರಿಂದ ಜನರಲ್ಲಿ ಜಾಗೃತಿ ಮೂಡಿಸುವ ಹೊಣೆ ಪತ್ರಕರ್ತರ ಮೇಲಿದೆ ಎಂದು ಕಿವಿಮಾತು ಹೇಳಿದರು.

ಪತ್ರಿಕೋದ್ಯಮದಲ್ಲಿ ಕ್ಷಣಕ್ಷಣಕ್ಕೂ ಸವಾಲುಗಳಿವೆ. ಪ್ರತಿ ದಿನವೂ ಕಲಿಯಲು ಹೊಸ ಹೊಸ ಸಂಗತಿಗಳಿವೆ. ಪತ್ರಕರ್ತನಾದವನಿಗೆ ಉತ್ತಮ ಸಾಮಾಜಿಕ ಸಂಪರ್ಕವಿರಬೇಕು. ಆಗ ಮಾತ್ರ ಆತ ತನ್ನ ಹಾದಿಯಲ್ಲಿ ಗೆಲ್ಲಲು ಸಾಧ್ಯ ಎಂದು ಅವರು ಹೇಳಿದರು. ನಂತರ ವಿದ್ಯಾರ್ಥಿಗಳ ಜೊತೆ ಸಂವಾದ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಮಾಧವ ಭಟ್ ಮತ್ತು ಪತ್ರಿಕೋದ್ಯಮ ಉಪನ್ಯಾಸಕಿ ಸ್ವಾತಿ ಉಪಸ್ಥಿತರಿದ್ದರು. ಪತ್ರಿಕೋದ್ಯಮ ವಿಭಾಗಮುಖ್ಯಸ್ಥರಾಕೇಶ್ ಕುಮಾರ್ ಕಮ್ಮಾಜೆ ಸ್ವಾಗತಿಸಿ, ವಂದಿಸಿ. ಕಾರ್ಯಕ್ರಮವನ್ನು ನಿರೂಪಿಸಿದರು.

# ಕಾಲೇಜಿನಲ್ಲಿ ಲಲಿತ ಕಲಾ ಸಂಘದ ಉದ್ಘಾಟನೆ

**ಪುತ್ತೂರು:** ಕಲೆ ಪ್ರಕೃತಿದತ್ತವಾದುದು. ಕಲಾವಿದ ಕಲೆಯನ್ನು ಪ್ರಕೃತಿಯಿಂದ ರೂಪಾಂತರಗೊಳಿಸುತ್ತಾನೆ. ಪ್ರಕೃತಿ ಮತ್ತು ಕಲೆ ಎರಡೂ ಒಂದೇ. ಕಲೆಯ ಜೊತೆ ಮನುಷ್ಯ ಬೆರೆತುಕೊಂಡಿದ್ದಾನೆ. ಆದರೆ ಯುವ ಜನರು ಕಲೆಯ ಕೊರತೆಯಿಂದಾಗಿ ಹಾದಿ ತಪ್ಪುತ್ತಿದ್ದಾರೆ. ಕಲೆಗೆ ವಿಕೃತಿಯನ್ನೂ ಕೂಡ ಸಂಸ್ಕೃತಿಯನ್ನಾಗಿಸುವ ಶಕ್ತಿಯಿದೆ ಎಂದು ವಿದುಷಿ ಮಂಜುಳಾ ಸುಬ್ರಹ್ಮಣ್ಯ ಹೇಳಿದರು




ಮಂಜುಳಾ ಸುಬ್ರಹ್ಮಣ್ಯ ಮಾತನಾಡುತ್ತಿರುವುದು

ಅವರು ಇಲ್ಲಿನ ವಿವೇಕಾನಂದ ಕಾಲೇಜಿನಲ್ಲಿ ನಡೆದ ಲಲಿತ ಕಲಾ ಸಂಘವನ್ನು ಉದ್ಘಾಟಿಸಿ ಮಾತನಾಡಿದರು.

ಕಲೆ ಎಂಬುದು ನಮ್ಮ ಮನಸ್ಸನ್ನು ಮೃದುಗೊಳಿಸುತ್ತದೆ. ಕಲೆಯೊಳಗೆ ಭಾವನೆ ಇದೆ. ಪ್ರತಿಯೊಬ್ಬ ಕಲಾವಿದ ತನ್ನ ಬದುಕಿನ ಅನುಭವಗಳನ್ನು ಕಲೆಯ ಮೂಲಕ ಪ್ರಸ್ತುತಪಡಿಸಿತ್ತಾನೆ. ಜನರ ಜೊತೆ ಬೆರೆಯುವವನೆ ನಿಜವಾದ ಕಲಾವಿದ. ಜೀವನ ಮತ್ತು ಕಲೆ ಎಂದಿಗೂ ಬೇರೆ ಬೇರೆಯಲ್ಲ ಎಂದು ಅವರು ನುಡಿದರು.

ಕಲೆ ಕೇವಲ ಹಣ ಸಂಪಾದನೆಯ ಉದ್ದೇಶವನ್ನು ಹೊಂದಿರಬಾರದು. ಕಲೆ ಎಂಬುದು ಸೌಂದರ್ಯ ಪ್ರಜ್ಞೆಯನ್ನು ಹೊಂದಿದ್ದಾಗ ಮಾತ್ರ ಅದು ಪರಿಣಾಮಕಾರಿಯಾಗಿರುತ್ತದೆ. ಆಗ ಅದು ಜೀವನವನ್ನು ರೂಪಿಸುತ್ತದೆ. ಕಲೆ ಒಂಟಿತನವನ್ನು ದೂರ ಮಾಡುತ್ತದೆ ಎಂದು ಅಭಿಪ್ರಾಯ ಪಟ್ಟರು.

ಕಾ ಂ ು ್ ರ ಕ ್ರ ವ ು ದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಎಚ್ ಮಾಧವ್ ಭಟ್ ಮಾತನಾಡಿ ಬರೀ ಕಲಾವಿದನಿದ್ದಾಗ ಮಾತ್ರ ಕಲೆ ಸಂಪೂರ್ಣವಾಗುವುದಿಲ್ಲ. ಅದರ ಜೊತೆಗೆ ಕಲಾ ಪೋಷಕರೂ ಬೇಕು. ಕಲೆ ಜೀವನದ ಪ್ರತಿಬಿಂಬ. ಕಲೆಯಿಲ್ಲದೇ ಜೀವನವಿಲ್ಲ. ಆದ್ದರಿಂದ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಆಕರ್ಷಿತರಾಗಬೇಕು ಎಂದು ಅವರು ಕಿವಿಮಾತು ಹೇಳಿದರು.

ನಂತರ ವಿದ್ಯಾರ್ಥಿಗಳೇ ರಚಿಸಿ, ರಾಗ ಸಂಯೋಸಿದ ಹಾಡನ್ನು ಹಾಡಲಾಯಿತು. ಮತ್ತು ವಿದ್ಯಾರ್ಥಿ ಪ್ರಜ್ವಲ್‌ನಿಂದ ಚಿತ್ರಕಲಾ ಪ್ರದರ್ಶನ ನಡೆಯಿತು.

ಕಾರ್ಯಕ್ರಮದಲ್ಲಿ ವಾಣಿಜ್ಯ ವಿಭಾಗದ ಉಪನ್ಯಾಸಕಿ ವಿಜಯ ಸರಸ್ವತಿ ಉಪಸ್ಥಿತರಿದ್ದರು. ಯಶಸ್ವಿನಿ.ಎನ್ ಸ್ವಾಗತಿಸಿದರು. ಸುಕನ್ಯ ಮತ್ತು ತಂಡದವರು ಪ್ರಾರ್ಥಿಸಿದರು. ರಕ್ಷಿತಾ. ಎಚ್ ವಂದಿಸಿದರು. ಪ್ರಜ್ಞಾ ಬಾರ್ಯ ಮತ್ತು ಅನುಪಮಾ ನಾಯಕ್ ಕಾರ್ಯಕ್ರಮವನ್ನು ನಿರೂಪಿಸಿದರು.

# ‘ಮಾದಕ ದ್ರವ್ಯಗಳಿಗೆ ಮಾರು ಹೋಗದಿರಿ’

**ಪುತ್ತೂರು:** ಬದಲಾಗುತ್ತಿರುವ ತಾಂತ್ರಿಕ ಯುಗದಲ್ಲಿ ಯುವ ಜನಾಂಗ ಜೀವನದಲ್ಲಿ ಶಿಸ್ತು ಮತ್ತು ನೈತಿಕತೆಯಿಂದ ದೂರ ಸರಿಯುತ್ತಿದೆ. ವೈಯಕ್ತಿಕ ಜೀವನದಲ್ಲಿ ನೈತಿಕತೆ-ಯ ಮಟ್ಟ ಕುಸಿದಾಗ ಯುವಕರು ಮಾದಕ ದ್ರವ್ಯಗಳತ್ತ ಹೆಚ್ಚು ಹೆಚ್ಚು ಆಕರ್ಷಿತರಾಗುತ್ತಾರೆ. ಈ ಮೂಲಕ ತಮ್ಮ ಭವಿಷ್ಯವನ್ನು ತಾವೇ ಹಾಳುಗೆಡವುತ್ತಿದ್ದಾರೆ ಎಂದು ವಿವೇಕಾನಂದ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕ ಡಾ. ಅರುಣ್ ಪ್ರಕಾಶ್ ಹೇಳಿದರು.

ಅವರು ಇತ್ತೀಚೆಗೆ ಇಲ್ಲಿನ ವಿವೇಕಾನಂದ ಕಾಲೇಜಿನಲ್ಲಿ ನಡೆದ ಅಂತರಾಷ್ಟ್ರೀಯ ಮಾದಕದ್ರವ್ಯ ವಿರೋಧಿ ದಿನಾಚರಣೆ ಕಾರ್ಯಕ್ರಮ ದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾದಕದ್ರವ್ಯ ವ್ಯಸನ ಮತ್ತು ಕಳ್ಳಸಾಗಾಟದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.

ಸಮಾಜಕ್ಕೆ ಇಂದು ನೈತಿಕ ಶಿಕ್ಷಣದ ಅಗತ್ಯವಿದೆ. ಇದಲ್ಲದೆ ಯುವಜನರು ದುಶ್ಚಟಗಳಿಗೆ ಬಲಿಯಾಗುತ್ತಿರುವುದನ್ನು ತಪ್ಪಿಸಲು ಮಾದಕ ದ್ರವ್ಯಗಳ ಮಾರಾಟದ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲೇಬೇಕಾದ ಅಗತ್ಯವಿದೆ. ಕೇವಲ ಆಚರಣೆಗೆ ಸೀಮಿತವಾಗಿರದೆ, ಸಮಾಜ ಮತ್ತು ಸರಕಾರ ಈ ಪಿಡುಗಿನ ಬಗ್ಗೆ ಜಾಗೃತಿಯನ್ನು ಜಂ-ಟಿಯಾಗಿ ನಿರ್ವಹಿಸಬೇಕು. ಸಮಾಜದಿಂದ ಜನಜಾಗೃತಿ ಮತ್ತು ಸರಕಾರದಿಂದ ಶಿಸ್ತಿನ




ಉಪನ್ಯಾಸಕ ಹರಿಪ್ರಸಾದ್ ಮಾತನಾಡುತ್ತಿರುವುದು

ಕ್ರಮವೇ ಈ ಸಮಸ್ಯೆ ಪರಿಹಾರಕ್ಕಾಗಿ ಪೂರಕ ಕ್ರಮಗಳು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಎಚ್. ಮಾಧವ ಭಟ್ ಪ್ರಸ್ತಾವನೆಗೈದು ಮಾದಕ ದ್ರವ್ಯಗಳಿಂದ ವಿದ್ಯಾರ್ಥಿಗಳು ದೂರವಿದ್ದು ಸಮಾಜದಲ್ಲಿ ಜಾಗೃತಿಯನ್ನು ಮೂಡಿಸುವ ಜವಾಬ್ದಾರಿಯ ಅಗತ್ಯವಿದೆ ಎಂದರಲ್ಲದೆ ಆಧುನಿಕ ಯುಗದಲ್ಲಿ ಮಾದಕದ್ರವ್ಯ ದೊಡ್ಡ ಮಾರಕ ಸಂಗತಿಯಾಗಿ ಕಾಡುತ್ತಿದೆ ಹಾಗೂ ಅದು ಯುವಕರನ್ನು ಬಲಿ ತೆಗೆದುಕೊಳ್ಳುತ್ತಿದೆ. ಈ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಅಗತ್ಯವಿದೆ ಎಂದು ಹೇಳಿದರು.

ರಾಷ್ಟ್ರೀಯ ಸೇವಾ ಯೋಜನಾಧಿಕಾರಿ, ಕಾಲೇಜಿನ ವಾಣಿಜ್ಯ ವಿಭಾಗದ ಉಪನ್ಯಾಸಕ ಹರಿಪ್ರಸಾದ್.ಎನ್ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

# ವಿವೇಕಾನಂದದಲ್ಲಿ ಗುರುಪೂರ್ಣಿಮಾ ಆಚರಣೆ

**ಪುತ್ತೂರು:** ವ್ಯಾಸ ಎಂದರೆ ಒಬ್ಬ ವ್ಯಕ್ತಿ ಅಲ್ಲ, ಬದಲಾಗಿ ಅದು ಒಂದು ಪದವಿ. ವ್ಯಾಸ ಎಂದರೆ ಗುರು ಪರಂಪರೆಯಲ್ಲೇ ಶ್ರೇಷ್ಠನಾದವ ಎಂದರ್ಥ. ಇನ್ನೊಂದು ಅರ್ಥದಲ್ಲಿ ಜ್ಞಾನವೆಂಬ ಬೆಳಕು ಮತ್ತು ಅಜ್ಞಾನವೆಂಬ ಕತ್ತಲು ಸಂಧಿಸುವ ಸ್ಥಳ. ಜ್ಞಾನಿಯಾದವ ಬೆಳಕಿನ ಕಡೆಯತ್ತ ಸಾಗುತ್ತಾ ಹೋದರೆ, ಅಜ್ಞಾನಿಯಾದವ ದಿನದಿಂದ ದಿನಕ್ಕೆ ಕತ್ತಲಿನ ಕಡೆಗೆ ಸಾಗುತ್ತಿರುತ್ತಾನೆ. ವಿದ್ಯಾರ್ಥಿಗಳನ್ನು ಅಂಧಕಾರದಿಂದ ಬೆಳಕಿನೆಡೆಗೆ ಕರೆ ತರುವವನೆ ನಿಜವಾದ ಗುರು ಎಂದು ಕೊಡಿಪ್ಪಾಡಿಯ ನಾರಾಯಣ ಜೋಯಿಸ ಎಂ ಹೇಳಿದರು.




ನಾರಾಯಣ ಜೋಯಿಸ ಮಾತನಾಡುತ್ತಿರುವುದು

ಅವರು ಇತ್ತಿಚೆಗೆ ಇಲ್ಲಿನ ವಿವೇಕಾನಂದ ಕಾಲೇಜಿನಲ್ಲಿ ವಿಕಾಸಂ ಸಂಸ್ಕೃತ ಸಂಘದ ಆಶ್ರಯದಲ್ಲಿ ನಡೆದ ಗುರು ಪೂರ್ಣಿಮಾ ಆಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಆಧುನಿಕ ಜಗತ್ತಿನ ಶಿಕ್ಷಣ ರಂಗದಲ್ಲಿ ಅನೇಕ ಬದಲಾವಣೆಗಳಾದಂತೆ ಗುರು ಶಿಷ್ಯರ ಸಂಬಂಧದಲ್ಲಿಯೂ ಕೂಡ ಬದಲಾವಣೆಯಾಗಿದೆ. ವಿದ್ಯಾರ್ಥಿಗಳು ಉತ್ತಮ ಸ್ಥಿತಿಗೆ ತಲುಪಬೇಕಾದರೆ ಪ್ರಶ್ನೆಗಳನ್ನು ಕೇಳಬೇಕು. ಜೀವನದಲ್ಲಿ ಉತ್ತಮ ಸ್ಥಿತಿಗೆ ತಲುಪಲು ಉತ್ತರಗಳನ್ನು ಕಂಡುಕೊಳ್ಳಬೇಕು. ಅದರ ಜೊತೆಗೆ ತಮ್ಮ ಚಾರಿತ್ರ್ಯಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು ಎಂದು ಕಿವಿಮಾತು ಹೇಳಿದರು.

ಪ್ರತಿಯೊಬ್ಬ ಮಹಾನ್ ವ್ಯಕ್ತಿಯ ಹಿಂದೆ ಒಬ್ಬ ಗುರುವಿದ್ದಾನೆ. ವಿದ್ಯಾರ್ಥಿಗಳು ಪ್ರತಿಯೊಬ್ಬ ಗುರುವಿನಲ್ಲಿ ವ್ಯಾಸರ ಅಂಶವನ್ನು ಕಂಡುಕೊಂಡಾಗ ಮಾತ್ರ ಕಲಿತ ವಿದ್ಯೆ ನಮ್ಮನ್ನು ಸಶಕ್ತಗೊಳಿಸುತ್ತದೆ. ಸರಿಯಾದ ಶಿಕ್ಷಣವನ್ನು ನೀಡಿ ವಿದ್ಯಾರ್ಥಿಗಳ ಜೀವನವನ್ನು ರೂಪಿಸುವವನೇ ಗುರು ಎಂದು ಅವರು ನುಡಿದರು.

ಕಾ ಂ ು ್ ರ ಕ ್ರ ವ ು ದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಎಚ್ ಮಾಧವ್ ಭಟ್ ಮಾತನಾಡಿ ವಿನಯವನ್ನು ಬೆಳೆಸಿಕೊಂಡಾಗ ಮಾತ್ರ ಕಲಿತ ವಿದ್ಯೆಗೆ ಬೆಲೆ. ಇಲ್ಲವಾದಲ್ಲಿ ಅದು ವ್ಯರ್ಥವಾದುದು. ಯಾರು ನಮ್ಮನ್ನು ಅಜ್ಞಾನದಿಂದ ದೂರ ಮಾಡುತ್ತಾನೆಯೋ ಅವನೇ ನಿಜವಾದ ಗುರು. ಎಲ್ಲಿವರೆಗೆ ಗುರುವಂದನೆ ನಡೆ-ಯುತ್ತದೆಯೋ ಅಲ್ಲಿವರೆಗೆ ನಮ್ಮ ಚಾರಿತ್ರ್ಯ ಬೆಳೆಯುತ್ತದೆ ಎಂದು ಅವರು ಅಭಿಪ್ರಾಯ ಪಟ್ಟರು. ವಿದ್ಯಾರ್ಥಿನಿ ಸ್ಮಿತಾ ಗುರು ಪೂರ್ಣಿಮದ ಕುರಿತು ತಮ್ಮ ಅಭಿಪ್ರಾಯ ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಸಂಸ್ಕೃತ ವಿಭಾಗ ಮುಖ್ಯಸ್ಥೆ ಹಾಗೂ ವಿಕಾಸಂ ಸಂಸ್ಕೃತ ಸಂಘದ ಸಂಯೋಜಕಿ ಎಂ. ಉಮಾದೇವಿ ಉಪಸ್ಥಿತರಿದ್ದರು. ವಿಕಾಸಂನ ಅಧ್ಯಕ್ಷ ಸುದರ್ಶನ್ ಶರ್ಮ.ಕೆ ಸ್ವಾಗತಿಸಿದರು. ವಿದ್ಯಾರ್ಥಿನಿ ವಾಗೀಶ್ವರಿ ಪ್ರಾರ್ಥಿಸಿದರು. ಭಾಗ್ಯಶ್ರೀ ವಂದಿಸಿದರು. ಸುಪರ್ಣಾ ಎಂ ಕಾರ್ಯಕ್ರಮವನ್ನು ನಿರೂಪಿಸಿದರು.

# ‘ಪ್ರಾಯೋಗಿಕ ಬೆಳವಣಿಗೆ ಅಗತ್ಯ’

**ಪುತ್ತೂರು:** ಪತ್ರಿಕೋದ್ಯಮದಲ್ಲಿರುವ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳಬೇಕಾದರೆ ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ತಯಾರಾಗಬೇಕು. ಬರವಣಿಗೆ, ಸಂಪಾದನೆ, ಪುಟ ವಿನ್ಯಾಸ ಮೊದಲಾದ ಸಂಗತಿಗಳ ಬಗೆಗೆ ಪರಿಣಿತರಾಗಬೇಕು. ಎಂದು ವಿವೇಕಾನಂದ ಕಾಲೇಜಿನ ಪತ್ರಿಕೋದ್ಯಮ ಉಪನ್ಯಾಸಕಿ ಸ್ವಾತಿ ಹೇಳಿದರು. ಅವರು ಕಾಲೇಜಿನ ಪತ್ರಿಕೋದ್ಯಮ ವಿಭಾಗಕ್ಕೆ ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳ ಪರಿಚಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ವಿಕಸನ ಮಾಸಪತ್ರಿಕೆ, ವಿಕಸನ ನ್ಯೂಸ್, ಮಣಿಕರ್ಣಿಕ ಮಾತುಗಾರರ ವೇದಿಕೆ ಹೀಗೆ ಇಲ್ಲಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ತೊಡಗಿಸಿಕೊಳ್ಳುವುದಕ್ಕೆ ವಿಭಾಗದ ವತಿಯಿಂದ ಅವಕಾಶ ಕಲ್ಪಿಸಿಕೊಡಲಾಗಿದೆ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಪತ್ರಿಕೋದ್ಯಮ ವಿಷಯವನ್ನು ಆಯ್ದುಕೊಂಡ ಉದ್ದೇಶವನ್ನು ವಿವರಿಸಿದರು. ತಮ್ಮ ಪರಿಚಯವನ್ನು ಚೆನ್ನಾಗಿ ಮಾಡಿಕೊಂಡ ಸಾಗರ್ ಹಾಗೂ ಕಾವೇರಿ ಇವರಿಗೆ ಬಹುಮಾನ ನೀಡಲಾಯಿತು. ವಿಭಾಗದ ಮುಖ್ಯಸ್ಥ ರಾಕೇಶ್ ಕುಮಾರ್ ಕಮ್ಮಜೆ ಪ್ರಸ್ತಾವಿಸಿ ಸ್ವಾಗತಿಸಿದರು. ವಿದ್ಯಾರ್ಥಿ ಪ್ರಣವ್ ಕೆ.ವಿ. ಕಾರ್ಯಕ್ರಮ ನಿರ್ವಹಿಸಿ ವಂದಿಸಿದರು. ವಿಭಾಗದ ವತಿಯಿಂದ ಈ ಹಿಂದೆ ಹೊರತಂದ ವಿಕಸನ ವಾರ್ತೆ ಹಾಗೂ ವಿದ್ಯಾರ್ಥಿಗಳು ತಯಾರಿಸಿದ್ದ ‘ಜೀವನಂ’ ಚಿತ್ರವನ್ನು ಪ್ರದರ್ಶಿಸಲಾಯಿತು.

# ಜಾಗೃತಿ ಸಂಬಂಧಗಳ ಮಾಧ್ಯಮವಾಗಬೇಕು: ಕಲ್ಚಾರ್




ರಾಧಾಕೃಷ್ಣ ಕಲ್ಚಾರ್ ಮಾತನಾಡುತ್ತಿರುವುದು

**ಪುತ್ತೂರು:** ಆಧುನಿಕ ಜೀವನದಲ್ಲಿ ಭಾವನಾತ್ಮಕತೆ ಬೆಲೆ ಕಳೆದುಕೊಳ್ಳುತ್ತಿರುವುದರಿಂದ ಮನುಷ್ಯ ಜೀವನದ ಪರಸ್ಪರ ಸಂಬಂಧಗಳಿಗೆ ಪೆಟ್ಟು ಬೀಳುತ್ತಿದೆ. ಜೀವನಕ್ಕೆ ಭದ್ರತೆಯನ್ನು ಕೊಡುವುದು ಸಂಸ್ಕೃತಿ. ಹಿಂದೆ ಯಾವುದೇ ಸಮಸ್ಯೆಯನ್ನು ಬಗೆಹರಿಸಲು ಒಂದು ಕುಟುಂಬದಲ್ಲಿ ಮೂರು ತಲೆಮಾರುಗಳಿರುತ್ತಿದ್ದವು. ಆದರೆ ಇಂದು ವಿಭಕ್ತ ಕುಟುಂಬಗಳಲ್ಲಿ ಇದು ನಡೆಯುತ್ತಿಲ್ಲ. ಹೊರ ಜಗತ್ತಿನಿಂದ ಹೊಸ ಬೆಳಕು ಬರುವಂತಹ ಕಿಂಡಿಯೆಂದರೆ ಅದು ಜಾಗೃತಿ ಭಿತ್ತಿ ಪತ್ರಿಕೆ ಎಂದು ಬೆಳಿಯೂರು ಕಟ್ಟೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ರಾಧಾಕೃಷ್ಣ ಕಲ್ಚಾರ್ ಹೇಳಿದರು.

ಅವರು ಇಲ್ಲಿನ ವಿವೇಕಾನಂದ ಕಾಲೇಜಿನಲ್ಲಿ ನಡೆದ ಜಾಗೃತಿ ಭಿತ್ತಿ ಪತ್ರಿಕೆಯ ಉದ್ಘಾಟನಾ ಸಮಾರಂಭದಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಜಾಗೃತಿ ಸಂಬಂಧಗಳ ಮಾಧ್ಯಮ ಆಗಬೇಕು, ಸಂಬಂಧಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಜಾಗೃತಿಯನ್ನು ಸೂಕ್ತವಾಗಿ ಬಳಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಇಂಗ್ಲೀಷ್ ಭಾಷಾ ಉಪನ್ಯಾಸಕಿ ಮೋತಿ ಬ್ಯಾ ಮಾತನಾಡಿ ಜಾಗೃತಿಯಲ್ಲಿ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಿಗೆ ಸಾಕಷ್ಟು ಅವಕಾಶವಿದೆ. ಇಂದು ವಿದ್ಯಾರ್ಥಿಗಳು ಬರವಣಿಗೆಯ ಕಡೆಗೆ ಹೆಚ್ಚಿನ ಗಮನ ನೀಡುತ್ತಿಲ್ಲ ಹೀಗಾಗಿ ಅವರು ತಮ್ಮನ್ನು ತಾವು ಅಭಿವ್ಯಕ್ತ ಪಡಿಸುವಲ್ಲಿ ಅಸಮರ್ಥರಾಗಿದ್ದಾರೆ. ಜಾಗೃತಿ ವಿದ್ಯಾರ್ಥಿಗಳಲ್ಲಿನ ಬರವಣಿಗೆಯ ಕೌಶಲ್ಯವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಎಂದು ಹೇಳಿದರು.

ಸಂಸ್ಕೃತ ಉಪನ್ಯಾಸಕ ಹಾಗೂ ಜಾಗೃತಿ ಭಿತ್ತಿ ಪತ್ರಿಕೆಯ ಸಂಯೋಜಕ ಡಾ. ಶ್ರೀಶಕುಮಾರ್ ಎಂ. ಕೆ ಸ್ವಾಗತಿಸಿದರು. ವಿದ್ಯಾರ್ಥಿ ಓಂ ಪ್ರಕಾಶ್ ವಂದಿಸಿದರು.

# ವಿಜ್ಞಾನ ಸಂಘದಿಂದ ಉಪನ್ಯಾಸ

**ಪುತ್ತೂರು:** ಐಐಟಿ ಮತ್ತು ಐಐಎಸ್‌ಸಿಗಳಂತಹ ವಿದ್ಯಾಲಯಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವಾಗ ಬರೀ ತರಗತಿ ವಿಷಯಗಳ ಕಲಿಕೆ ಮಾತ್ರ ಸಾಕಾಗುವುದಿಲ್ಲ. ಕಲಿಯುವ ವಿಷಯದ ಬಗ್ಗೆ ಆಳವಾದ ಮಾಹಿತಿ ಬೇಕಾಗುತ್ತವೆ. ಇಂತಹ ಪರೀಕ್ಷೆಗಳಿಗೆ ತಯಾರಿ ನಡೆಸುವಾಗ ಪರಿಣಿತರಿಂದ ಮಾಹಿತಿ ಪಡೆಯುವ ಅಗತ್ಯವಿದೆ ಎಂದು ಭುವನೇಶ್ವರ ಐಐಟಿ ಸಂಶೋಧನಾ ಅಭ್ಯರ್ಥಿ ಮಂಜುನಾಥ.ಎಂ ಹೇಳಿದರು.



ಅವರು ಇತ್ತೀಚೆಗೆ ವಿವೇಕಾನಂದ ಕಾಲೇಜಿನಲ್ಲಿ ವಿಜ್ಞಾನ ಸಂಘದ ಆಶ್ರಯದಲ್ಲಿ ನಡೆದ ಅತಿಥಿ ಉಪನ್ಯಾಸ ಕಾರ್ಯಕ್ರಮದಲ್ಲಿ ವಿಜ್ಞಾನದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಹೇಗೆ ಎಂಬ ವಿಷಯದ ಕುರಿತು ಮಾತನಾಡಿದರು.

ವಿಜ್ಞಾನ ಸಂಘದ ಸಂಚಾಲಕ, ರಸಾಯನ ಶಾಸ್ತ್ರ ಉಪನ್ಯಾಸಕ ಡಾ.ಟಿ.ಸುಧಾಕರನ್ ಸ್ವಾಗತಿಸಿದರು. ಉಪನ್ಯಾಸಕ ಪ್ರೊ.ಎನ್. ನರಸಿಂಹ ಭಟ್ ವಂದಿಸಿದರು. ವಿದ್ಯಾರ್ಥಿನಿ ಚೈತ್ರ ಕಾರ್ಯಕ್ರಮವನ್ನು ನಿರೂಪಿಸಿದರು.